O.S. NO. 39/2021
DW -2 .
Dated 05-09-2024.

ಸಾಕ್ಷಿಯನ್ನು ಈ ದಿನ ದಿನಾಂಕ 05-09-2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು .

ಪಾಟಿ ಸವಾಲುಃ ವಾದಿ ಪರವಾಗಿ ಶ್ರೀ ಬಿ ಆರ್ ಎ ವಕೀಲರಿಂದಃ

ನನ್ನ ಶಿಕ್ಷಣ 7 ನೇ ತರಗತಿ ವರೆಗೆ ಆಗಿರುತ್ತದೆ. ನನ್ನ ಜನ್ಮ ತಾರೀಖು 01-06-1978 ಇರುತ್ತದೆ. ನನ್ನ ಖಾಯಂ ಊರು ಬೆಳವಡಿ ಎಂದರೆ ನಿಜ. ಈಗ ನಾನು ಧಾರವಾಡದಲ್ಲಿ ವಾಸವಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡನ ಊರು ಬೆಳವಡಿ. ನನ್ನ ಮದುವೆ ಎಷ್ಟನೇ ಇಸ್ವಿಯಲ್ಲಿ ಆಗಿರುತ್ತದೆ ಎಂದು ನನಗೆ ನೆನಪಿಲ್ಲ. ನನ್ನ ಗಂಡ ಉಳವಪ್ಪ ಧಾರವಾಡದಲ್ಲಿ ವಾಸವಿದ್ದಾರೆ ಎಂದರೆ ಸರಿಯಲ್ಲ. ನಮ್ಮ ಊರು ಬೆಳವಡಿಯಲ್ಲಿ ಇರುತ್ತಾರೆ. ನನ್ನ ಗಂಡ ಬೆಳವಡಿ ಗ್ರಾಮದಿಂದ ಧಾರವಾಡಕ್ಕೆ ತನ್ನ ಉಪಜೀವನಕ್ಕಾಗಿ ದುಡಿಯಲು ಹೊಗಿ ಅಲ್ಲೇ ದುಡಿಯುತ್ತಾ ವಾಸವಿರುತ್ತಾನೆ ಎಂದರೆ ಸರಿಯಲ್ಲ. ನಾನು ಮದುವೆ ಆದಾಗಿನಿಂದ ನನ್ನ ಗಂಡನ ಜೊತೆ ಯಲ್ಲಿ ಇದ್ದೇನೆ. ನಾನು ಹಾಜರುಪಡಿಸಿದ ಭಕ್ಷಿಸ ಪತ್ರ ನಿಡಿ- 14 ತಯಾರಿಸುವಾಗ ನಾನು ಹಾಜರು ಇದ್ದೇನು. ಸದರಿ ನಿಡಿ - 14 ರಲ್ಲಿ ನನ್ನ ವಿಳಾಸ ಹಾಲಿ ವಸತಿ ಧಾರವಾಡ ಅಂತಾ ತೊರಿಸಿದ್ದು ನಿಜ ಇರುತ್ತದೆ. ನಾನು 2015 ರ ಪೂರ್ವದಿಂದಲೂ ಧಾರವಾಡದಲ್ಲಿ ವಾಸವಿದ್ದೆನೆ ನಾನು ಹೇಳುವಂತೆ ಬೆಳವಡಿಯಲ್ಲಿ ವಾಸವಿಲ್ಲ ಎಂದರೆ ಸರಿಯಲ್ಲ. ಈ ಕೇಸಿಗೆ ಅನುಕೂಲ ಆಗಲಿ ಅಂತಾ ಬೆಳವಡಿಯಲ್ಲಿ ವಾಸವಿದ್ದೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

O.S. NO. 39/2021
DW -2 .
Dated 05-09-2024.

ಬೆಳವಡಿ ಗ್ರಾಮದಲ್ಲಿ ನನ್ನ ಗಂಡ ಹೆಸರಿನಲ್ಲಿ ಮನೆ ಇರುತ್ತದೆ. ಸದರಿ ಮನೆಯ ಪಂಚಾಯಿತಿ ನಂಬರ ನನಗೆ ಹೇಳಲು ಬರುವುದಿಲ್ಲ. ನನ್ನ ಗಂಡನ ಹೆಸರಿನಲ್ಲಿ ಬೆಳವಡಿ ಗ್ರಾಮದಲ್ಲಿ ಮನೆ ಇದೆ ಎಂದು ತೊರಿಸಲು ದಾಖಲೆ ಹಾಜರು ಮಾಡಿರುವುದಿಲ್ಲ. ಸಾಕ್ಷಿ ಮುಂದುವರೆದು ಮುಂದೆ ಹಾಜರು ಮಾಡುತ್ತೇನೆ ಎಂದು ನುಡಿದಿರುತ್ತಾರೆ. ನನ್ನ ಗಂಡನ ಹೆಸರಿನಲ್ಲಿ ಬೆಳವಡಿ ಗ್ರಾಮದ ಸರ್ವೆ ನಂಬರ ನಲ್ಲಿ 3 ಎಕರೆ ಜಮಿನು ಇರುತ್ತದೆ. ಅದರ ಸರ್ವೆ ನಂಬರ ಗೊತ್ತಿಲ್ಲ. ಸದರಿ 3 ಎಕರೆ ಜಮಿನು ನನ್ನ ಗಂಡನಿಗೆ ಪಿತ್ರಾರ್ಜಿತ ಆಗಿ ಬಂದಿರುತ್ತದೆ. ನನ್ನ ಮಾವ ಈಗ ಜೀವಂತ ಇರುವುದಿಲ್ಲ. ನನ್ನ ಮಾವ ಮೃತ ಪಟ್ಟ ನಂತರ ಸದರಿ 3 ಎಕರೆ ವಾರಸಾ ನನ್ನ ಗಂಡನ ಹೆಸರಿಗೆ ದಾಖಲಾಗಿರುತ್ತದೆ. ಈ ಕುರಿತು ನಾನು ದಾಖಲೆಗಳನ್ನು ಹಾಜರು ಮಾಡಿರುವುದಿಲ್ಲ. ನನ್ನ ಗಂಡನ ಹೆಸರಿಗೆ 3 ಎಕರೆ ಜಮಿನು ಪಿತ್ರಾರ್ಜಿತ ಆಸ್ತಿ ಇರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಮತ್ತು ನನ್ನ ಗಂಡನಿಗೆ ಯಾವುದೇ ಮನೆ ಮತ್ತು ಜಮಿನು ಇಲ್ಲದಿರುವುದರಿಂದ ನಾವು ಧಾರವಾಡಕ್ಕೆ ದುಡಿಯಲು ಹೊಗಿ ಅಲ್ಲೇ ವಾಸವಿರುತ್ತೇವೆ ಎಂದರೆ ಸರಿಯಲ್ಲ. ನಾನು ಹೇಳುವಂತೆ ನನಗಾಗಲಿ ಮತ್ತು ನನ್ನ ಗಂಡನಿಗೆ ಜಮಿನಿನಿಂದ ಯಾವುದೇ ಉತ್ಪನ್ನ ಇರುವುದಿಲ್ಲ ಎಂದರೆ ಸರಿಯಲ್ಲ.

ನನ್ನ ಅಜ್ಜನ ಹೆಸರು ಚಂದ್ರಪ್ಪ ಮಹಾರುದ್ರಪ್ಪ ದೂಪದಾಳೆ ಇರುತ್ತದೆ. ನನ್ನ ಅಜ್ಜ ಚಂದ್ರಪ್ಪನಿಗೆ ಸದೆಪ್ಪ ಮತ್ತು ಈರಪ್ಪ ಎಂಬ ಇಬ್ಬರು ಸಹೊದರರು ಇರುತ್ತಾರೆ. ದಾವಾ ಆಸ್ತಿ

O.S. NO. 39/2021

DW -2 .

Dated 05-09-2024.

ಕ್ರಮ ಸಂಖ್ಯೆ 1 ರಿಂದ 3 ನನ್ನ ಅಜ್ಜ ಚಂದ್ರಪ್ಪನ ಪಿತ್ರಾರ್ಜಿತ ಆಸ್ತಿಗಳು ಎಂದರೆ ನನಗೆ ಗೊತ್ತಿಲ್ಲ. ನಾನು ನನ್ನ ಅಜ್ಜ ಮತ್ತು ಆತನ ಸಹೋದರರಾದ ಸದೆಪ್ಪ ಮತ್ತು ಈರಪ್ಪ ರವರನ್ನು ನೋಡಿರುತ್ತೇನೆ. ಅವರು ಬೇರೆ ಬೇರೆ ಇರುತ್ತಿದ್ದರು. ಅವರು ನನ್ನ ಮದುವೆ ಪೂರ್ವ ನನ್ನ ಅಜ್ಜ ಮತ್ತು ಅವರ ಸಹೋದರರು ಬೇರೆ ಆಗಿದ್ದರು. ಅವರು ಬೇರೆ ಆಗುವ ಸಮಯದಲ್ಲಿ ತಮ್ಮ ತಂದೆಯಿಂದ ಬಂದಿರುವ ಆಸ್ತಿಗಳಲ್ಲಿ ವಾಟ್ನಿ ಮಾಡಿಕೊಂಡಿದ್ದರು ಎಂದರೆ ನಿಜ. ನನ್ನ ಅಜ್ಜನ ಸಹೋದರನಾದ ಈರಪ್ಪನಿಗೆ ಮಕ್ಕಳು ಇರಲಿಲ್ಲ ಎಂದರೆ ನಿಜ. ಹೀಗಾಗಿ ಈರಪ್ಪನ ಹಿಸ್ಸೆಗೆ ಬಂದ ಆಸ್ತಿಯನ್ನು ನನ್ನ ಅಜ್ಜ ಚಂದ್ರಪ್ಪ ಮತ್ತು ಆತನ ಇನ್ನೊಬ್ಬ ಸಹೋದರ ಸದೆಪ್ಪ ಸಮನಾಗಿ ಹಂಚಿ ಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ವಾಟ್ನಿ ಯಲ್ಲಿ ದಾವಾ ಆಸ್ತಿ ಕ್ರಮ ಸಂಖ್ಯೆ 1 ರಿಂದ 3 ನನ್ನ ಅಜ್ಜ ಚಂದ್ರಪ್ಪನಿಗೆ ಬಂದಿರುವ ಆಸ್ತಿಗಳು ಎಂದರೆ ನಿಜ. ವಾಟ್ನಿ ಪ್ರಕಾರ ನನ್ನ ಅಜ್ಜ ಮತ್ತು ಆತನ ಸಹೋದರ ಸದೆಪ್ಪರವರಿಗೆ ತಮ್ಮ ತಮ್ಮ ಹಿಸ್ಸೆಗೆ ಬಂದಿರುವ ಆಸ್ತಿಗಳಲ್ಲಿ ಡೈರಿ ನಂಬರ 1093 ಪ್ರಕಾರ 1993 ರಲ್ಲಿ ಪ್ರತ್ಯೇಕವಾಗಿ ದಾಖಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿ ಕ್ರಮ ಸಂಖ್ಯೆ 4 ನನ್ನ ಅಜ್ಜ ಚಂದ್ರಪ್ಪನಿಗೆ ಯಾವಾಗ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ನನ್ನ ಅಜ್ಜ ಚಂದ್ರಪ್ಪನ ಉದ್ಯೋಗ ವಕ್ಕಲುತನ ಮಾತ್ರ ಇತ್ತು ಎಂದರೆ ನಿಜ. ಸದರಿ ದಾವಾ ಆಸ್ತಿ ಕ್ರಮ ಸಂಖ್ಯೆ 4 ಆಸ್ತಿಯನ್ನು ಪಿತ್ರಾರ್ಜಿತ ಆಸ್ತಿಗಳಾದ ದಾವಾ ಆಸ್ತಿ ಕ್ರಮ ಸಂಖ್ಯೆ 1 ರಿಂದ 3 ರ ಉತ್ಪನ್ನದಿಂದ ಬಂದ ಆದಾಯದಿಂದ ನನ್ನ ಅಜ್ಜ ಖರೀದಿ ಮಾಡಿರುತ್ತಾರೆ ಎಂದರೆ ನಿಜ.

O.S. NO. 39/2021
DW -2 .
Dated 05-09-2024.

ನನ್ನ ಅಜ್ಜ ಚಂದ್ರಪ್ಪನ ಹೆಂಡತಿ ಹೆಸರು ನಾಗಮ್ಮ ಎಂದರೆ ನಿಜ. ನನ್ನ ಅಜ್ಜ ಮತ್ತು ಅಜ್ಜಿಗೆ ವಾದಿ ಮತ್ತು ನನ್ನ ತಂದೆ 1 ನೇ ಪ್ರತಿವಾದಿ ಇಬ್ಬರೇ ಮಕ್ಕಳು ಎಂದರೆ ನಿಜ. ನನ್ನ ಅಜ್ಜಿ ನಾಗವ್ವ 13 ವರ್ಷ ಹಿಂದೆ ಮೃತಪಟ್ಟಿರುತ್ತಾಳೆ ಎಂದರೆ ನಿಜ. ನನ್ನ ತಂದೆ ಮತ್ತು ಆತನ ಸಹೋದರರಲ್ಲಿ ನನ್ನ ತಂದೆ ದೊಡ್ಡವನು ಇರತ್ತಾನೆ. ನನ್ನ ತಂದೆ ಮತ್ತು ನನ್ನ ಕಾಕನ ಉದ್ಯೊಗ ಶೇತ್ಕಿ ಎಂದರೆ ನಿಜ.

ಚಂದ್ರಪ್ಪ ಜೀವಂತ ಇದ್ದಾಗ ಆತ ಮತ್ತು ಆತನ ಮಕ್ಕಳು ಕೂಡಿಯೇ ಒಟ್ಟು ಕುಟುಂಬದಲ್ಲಿ ಇದ್ದರು ಎಂದರೆ ನಿಜ. ದಾವಾ ಜಮಿನುಗಳನ್ನು ಮೊದಲು ಅವರು ಸಾಮೂಹಿಕವಾಗಿ ಸಾಗುವಳಿ ಮಾಡುತ್ತಿದ್ದರು ಎಂದರೆ ನಿಜ. ಆಗ ಮನೆತನದ ಹಿರೆತನವನ್ನು ನನ್ನ ಅಜ್ಜ ಚಂದ್ರಪ್ಪನೇ ಮಾಡುತ್ತಿದ್ದನು ಎಂದರೆ ನಿಜ. ನನ್ನ ಅಜ್ಜ ಚಂದ್ರಪ್ಪ 2020 ರಲ್ಲಿ ಮೃತಪಟ್ಟಿರುತ್ತಾನೆ . ನಾನು ದಾವಾ ಜಮಿನುಗಳನ್ನು ಪ್ರತ್ಯಕ್ಷವಾಗಿ ನೊಡಿರುತ್ತೇನೆ.

(ಈ ಹಂತದಲ್ಲಿ ಮುಂದುವರೆದ ಪಾಟಿ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದುಡಲಾಯಿತು . )

(ಸಾಕ್ಷಿ ವಿಚಾರಣೆಯನ್ನು ನೆರವೇರಿಸಿದ್ದು , ಸಾಕ್ಷಿ ಹೇಳಿದ ಹೇಳಿಕೆಯನ್ನು ಬೆರಳಚ್ಚುಗಾರರಿಗೆ ಉಕ್ತ ಲೇಖನ ನೀಡಿ , ಅದನ್ನು ಗಣಕಿಕೃತಗೊಳಿಸಿದ ಮೇರೆಗೆ ದಾಖಲಿಸಲಾಯಿತು ).

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು
ಬೈಲಹೊಂಗಲ.